


**ತಂದೆ:** ಲೋ ಕತ್ತೆ ಮಗನೆ, ನಿನ್ನ ವರ್ತನೆಯಿಂದ ನನಗೆ ತಲೆ ಬಿಸಿಯಾಗ್ತಿದೆ.
**ಮಗ:** ಇರಬಹುದು ಅಪ್ಪ. ಆದರೆ ನನಗೀಗ ಒಂದು ವಿಷಯ ಗೊತ್ತಾಯ್ತು.
**ತಂದೆ:** ಏನು ಗೊತ್ತಾಯ್ತು ನಿನ್ನ ತಲೆ?
**ಮಗ:** ಅದೇ ಅಪ್ಪಾ ನೀನು ಕತ್ತೆ ಅನ್ನೋ ವಿಷಯ.

**ಹೆಂಡತಿ:** ಸ್ನಾನ ಆಯಿತಾ?
**ಗುಂಡ:** ಆಯಿತು.
**ಹೆಂಡತಿ:** ಮಡಿ ಪಂಚೆ ಉಟ್ಕೊಂಡು ಬನ್ನಿ.
**ಗುಂಡ:** ಉಟ್ಕೊಂಡು ಬಂದಿದ್ದೀನಿ. ಆದೇನು ಮಾಡ್ಬೇಕು ಹೇಳು.
**ಹೆಂಡತಿ:** ಹಾಗಿದ್ರೆ ನಾಯಿ ಮರಿಗೆ ಸ್ವಲ್ಪ ಹಾಲು ಕುಡಿಸಿಬಿಡಿ.

**ಗುಂಡ:** ಪುಟ್ಟ ನಿನ್ನ ಹೆಸರೇನು?
**ಪುಟ್ಟ:** ಪಿಂಕಿ.
**ಗುಂಡ:** ನಾನ್ ಕೇಳಿದ್ದು ಸ್ಕೂಲ್‌ನಲ್ಲಿ ಕರೆಯೋ ಹೆಸರು? ಮನೆಯಲ್ಲಿ ಕರೆಯೋದಲ್ಲ.
**ಪುಟ್ಟ:** ವಿದ್ಯಾ ಸಂಸ್ಕಾರ್

**ವೈದ್ಯ:** ಆಪರೇಷನ್ ಸಕ್ಸಸ್ ನಿಮ್ಮ ಕಿವುಡುತನ ನಿವಾರಣೆಯಾಗುವಂತೆ ಮಾಡಿದ್ದೀನಿ.
**ರೋಗಿ:** ಇಷ್ಟೊತ್ತು ನೀವು ಏನೋ ಹೇಳ್ತಿದ್ರಿ ಅಲ್ವಾ, ಡಾಕ್ಟ್ರೆ ಅದೊಂಚೂರು ಕೇಳ್ಲಿಲ್ಲ?

**ಗುಂಡ:** ನೀನು ಕುಂಟನಾಗುವ ಬದಲು ಕುರುಡನಾಗಿದ್ದರೆ ಹೆಚ್ಚು ದುಡ್ಡು ಸಿಗುತ್ತಿತ್ತು.
**ಭಿಕ್ಷುಕ:** ಮೊದಲು ನಾನು ಕುರುಡನಾಗೇ ಇದ್ದೆ ಸರ್ ಆಗ ಜನರು ಬರೀ ಸವಕಲು ನಾಣ್ಯಗಳನ್ನೇ ಹಾಕುತ್ತಿದ್ದರು. ಆದಕ್ಕೆ ಈಗ ನಾನು ಕುಂಟನಾಗಿದ್ದೇನೆ.

**ಗುಂಡ:** ನಂದು ವಾರ್ನ್ ಹೇಸ್ಟಿಂಗ್ ತಲೆ.
**ಗೆಳೆಯ:** ಅಷ್ಟೊಂದು ಚುರುಕಾ?
**ಗುಂಡ:** ಅದು ಮುಂಚೆ. ಈಗ ಕೆಲಸ ಮಾಡ್ತಿಲ್ಲ ಅಷ್ಟೇ.

**ಪ್ರಿಯಕರ:** ಪ್ರಿಯೆ, ನಿನ್ನನ್ನು ನೋಡ್ತಿದ್ದರೆ ನಡಿಯೋ ಗಡಿಯಾರಾನೂ ನಿಲ್ಲುತ್ತೆ.
**ಪ್ರೇಯಸಿ:** ಪ್ರಿಯಕರ, ನಿನ್ನನ್ನು ನೋಡ್ತಿದ್ರೆ ಕೆಟ್ಟೋಗಿರೋ ಗಡಿಯಾರನೂ ಓಡೋಕೆ ಶುರು ಮಾಡುತ್ತೆ.




**ಗುಂಡ:** ಯಾಕೆ ಇಷ್ಟೊಂದು ಖುಷಿ ಪಡ್ತಾ ಇದೀಯಾ?
**ರಾಗಿಣಿ:** ಎರಡು ವಿಷಯಗಳಿಗೆ ಖುಷಿಯಾಗ್ತಿದೆ. ಒಂದು ನೀವು ನನ್ನನ್ನು ಮದುವೆ ಆಗ್ತೀನಿ ಅಂದಿದ್ದಕ್ಕೆ.
**ಗುಂಡ:** ಮತ್ತೊಂದು?
**ರಾಗಿಣಿ:** 'ನೀನೊಬ್ಬಳು ಪೆದ್ದಿ. ಹೀಗೆ ಇದ್ರೆ ಯಾವುದಾದರೊಂದು ಕತ್ತೆಗೆ ನಿನ್ನನ್ನು ಕೊಟ್ಟು ಮದುವೆ ಮಾಡ್ತೀನಿ' ಅಂತ ಅಮ್ಮ ಯಾವಾಗ್ಲೂ ಬೈತಿದ್ರು. ಈಗ ನೋಡಿದ್ರೆ ನೀವು ಸಿಕ್ಕಿದ್ದೀರಿ ಆದಕ್ಕೆ.

**ರಾಯರು:** ಏನ್ರೀ ಗುಂಡ ಮನೆ ಮೇಲೆ ಹತ್ತಿ, ಸುತ್ತಲೂ ನೋಡ್ತಿದ್ದೀರಲ್ಲ ಯಾಕೆ?
**ಗುಂಡ:** ಮನೆ ಮೇಲೆ ಸಾಲ ಕೊಡ್ತಾರೆ ಅಂತ ಯಾರೋ ಹೇಳಿದ್ರು ಸರ್, ಆದ್ಕೆ ನೋಡ್ತಾ ಇದೀನಿ ಅದ್ ಹೇಗೆ ಕೊಡ್ತಾರೆ ಅಂತ.

**ಗುಂಡ:** ಡಾಕ್ಟ್ರೇ ನನ್ನ ಎದೆ ಹೊಡೆದುಕೊಳ್ತಾ ಇದೆ. ತಲೆ ಸಿಡೀತಾ ಇದೆ. ಮೊದಲು ನನ್ನ ಪ್ರಾಣ ಉಳಿಸಿ.
**ವಕೀಲ:** ನಾನು ಡಾಕ್ಟರ್ ಅಲ್ಲ ವಕೀಲ.
**ಗುಂಡ:** ಇಲ್ಲಾ ಸರ್ ನನ್ನ ಪಾಲಿಗೆ ನೀವೆ
**ವಕೀಲ:** 30 ವರ್ಷಗಳಿಂದ ನನ್ನ ಹೆಂಡತಿ ಜೊತೆ ಸಂಸಾರ ನಡೆಸಿ ಸಾಕಾಗಿಹೋಗಿದೆ. ಆದ್ಕೆ ಬೇಗ ಡೈವೋರ್ಸ್ ಕೊಡಿಸಿಬಿಡಿ. ಆಮೇಲೆ ನನ್ನ ಎದೆ ಹೊಡೆದುಕೊಳ್ಳೋದು, ತಲೆ ಸಿಡಿಯೋದು ತಾನಾಗಿಯೇ ನಿಂತು ಹೋಗುತ್ತದೆ.

**ರಾಯರು:** ಇದೇನ್ರಿ, ಒಂದೇ ದಿನದ ಐದಾರು ಪತ್ರಿಕೆಗಳು ಇವೆ. ಅಷ್ಟೂ ಪತ್ರಿಕೆಗಳನ್ನು ನೀವು ತರಿಸುತ್ತೀರಾ?
**ಗುಂಡ:** ಅಯ್ಯೋ ಹಾಗೇನೂ ಇಲ್ಲ ಸರ್ ಇದೆಲ್ಲ ನಮ್ ಮನೆಯ ನಾಯಿಯ ಕರಾಮತ್ತು. ಅಕ್ಕಪಕ್ಕದ ಯಾರ ಮನೆ ಮುಂದೆ ಪೇಪರ್ ಬಿದ್ರೂ ಅದನ್ನೆಲ್ಲ ನಮ್ಮ ಮನೆಗೆ ತಂದು ಹಾಕುತ್ತೆ.
**ರಾಯರು:** ಎಷ್ಟು ಒಳ್ಳೆ ನಾಯಿ. ಇದನ್ನು ನನಗೆ ಕೊಡ್ತೀರಾ?
**ಗುಂಡ:** ಕೊಡ್ತೀನಿ. ಅದಕ್ಕೂ ಮೊದಲು ನಿರೀಕ್ಷಣಾ ಜಾಮೀನು ತಗೊಂಡಿರಿ.




ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು